**ಓ ಎಸ್ 24/2023 ಪಿಡಬ್ಲ್ಯೂ3**

**ಸಾಕ್ಷಿಯನ್ನು ದಿಃ 23.04.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ನಾನು ಮತ್ತು ಮೃತ ಗೋಪಾಲಸ್ವಾಮಿ ಸಂಬಂಧಿಕರು. ವಾದಿಯು ನನ್ನ ತಂಗಿ. ನಾನು, ವಾದಿ ಮತ್ತು 3 ಮತ್ತು 4 ನೇ ಪ್ರತಿವಾದಿಗಳು ಚೆನ್ನಾಗಿದ್ದೇವೆ. ಸಾಕ್ಷಿಯು ಮುಂದುವರಿದು ಅವರು ಯಾರು ಈಗ ಸಂಪರ್ಕದಲ್ಲಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳನ್ನು ಒಳಗೊಂಡಂತೆ ಕುಟುಂಬದ ಇನ್ನಿತರ ಆಸ್ತಿಗಳನ್ನು ಸೇರಿಸಿ 3 ಮತ್ತು 4 ನೇ ಪ್ರತಿವಾದಿಗಳು 1 ನೇ ಪ್ರತಿವಾದಿ ಮತ್ತು ಇನ್ನಿತರರ ವಿರುದ್ಧ ಪಾಂಡವಪುರದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 32/2022 ನ್ನು ದಾಖಲಿಸಿದ್ದಾರೆ ಎಂದರೆ ಸರಿ. ಆ ದಾವೆಯ ಪ್ರತಿ ಸುನಾವಣೆಯ ದಿನಾಂಕದಂದು ಅವರುಗಳ ಜೊತೆ ನಾನು ನ್ಯಾಯಾಲಯಕ್ಕೆ ಹಾಜರಾಗುತ್ತೇನೆ ಎಂದರೆ ಸರಿಯಲ್ಲ. ಹಾಗೆಯೇ 1 ನೇ ಪ್ರತಿವಾದಿಯ ಸೋದರತ್ತೆಯ ಮಗನೂ ಸಹ ದಾವಾ ಆಸ್ತಿಗಳನ್ನು ಸೇರಿದಂತೆ ಇತರೆ ಆಸ್ತಿಗಳಲ್ಲಿ ಭಾಗ ಬರಬೇಕು ಎಂದು ಕೇಸು ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ರಾಜು ಎಂಬುವವರು ನನಗೆ ಗೊತ್ತಿದ್ದಾರೆ. ಅವರು ಗೋಪಾಲಸ್ವಾಮಿಯವರ ಅಕ್ಕ ತಂಗಿಯರ ಮಗ. ಅವರು ಹಾಕಿರುವ ಕೇಸಿನ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

ಗೋಪಾಲಸ್ವಾಮಿಯವರು ಬದುಕಿದ್ದಾಗ ಸಾಲ ಮಾಡಿದ್ದರು ಎಂಬ ಸಂಗತಿ ನನಗೆ ಗೊತ್ತಿದೆ. ಆ ಕಾರಣದಿಂದ ಗೋಪಾಲಸ್ವಾಮಿರವರ ಮರಣಾ ನಂತರ ಸಾಲ ವಸೂಲಾತಿಗಾಗಿ ಅವರ ಮಕ್ಕಳ ವಿರುದ್ಧ ಹಲವಾರು ಕೇಸುಗಳನ್ನು ಹಾಕಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಗೋಪಾಲಸ್ವಾಮಿಯವರು ನನ್ನ ತಂಗಿಯಾದ ವಾದಿಯಿಂದ ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ದಿನಾಂಕ 29.01.2018 ರಂದು ಕ್ರಯದ ಮಾತುಕತೆಗೆ ಸೇರಿದ್ದರು. ಮಾತುಕತೆಗೆ ನಾರಾಯಣಗೌಡ, ಸತ್ಯ ನಾರಾಯಣ, ನಾನು, ನನ್ನ ತಂಗಿ ಸುನೀತಾ ಸೇರಿದ್ದೆವು. ಬನಘಟ್ಟದ ರೈಸ್ ಮಿಲ್ ಬಳಿ ಆ ಮಾತುಕತೆಗೆ ಸೇರಿದ್ದೆವು. ಆಗ ಸುಮಾರು ಬೆಳಿಗ್ಗೆ 10.00 ರಿಂದ 11.00 ಗಂಟೆ ಆಗಿತ್ತು. ಮಾತುಕತೆಯಲ್ಲಿ 0.10 ಗುಂಟೆ ಜಮೀನಿಗೆ ರೂ. 20 ಲಕ್ಷ ಕ್ರಯದ ಮೊಬಲಗು ನೀಡತಕ್ಕದ್ದು ಎಂದು ನಿರ್ಣಯವಾಯಿತು. ರೈಸ್ ಮಿಲ್ ನಡೆಸುವ ಸಲುವಾಗಿ ಮಾಡಿದ್ದ ಸಾಲವನ್ನು ಮತ್ತು ಇತರೆ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಾಡಿದ ಸಾಲವನ್ನು ತೀರಿಸಲು ಹಣ ಬೇಕಾಗಿದ್ದ ಕಾರಣ ಜಮೀನನ್ನು ಮಾರಾಟ ಮಾಡುತ್ತಿರುವುದಾಗಿ ಗೋಪಾಲಸ್ವಾಮಿರವರು ಹೇಳಿದ್ದರು. ಸುಮಾರು 6 ತಿಂಗಳ ಹಿಂದಿನಿಂದಲೂ ಮಾರಾಟ ಮಾಡುವುದಾಗಿ ಹೇಳುತ್ತಿದ್ದರು. ಆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಗೋಪಾಲಸ್ವಾಮಿರವರ ಆಸ್ತಿ , ಪಶ್ಚಿಮಕ್ಕೆ ಶಿವರಾಮುರವರ ಜಮೀನು, ಉತ್ತರಕ್ಕೆ ಜವರೇಗೌಡರ ಮಕ್ಕಳ ಜಮೀನು, ದಕ್ಷಿಣಕ್ಕೆ ರಸ್ತೆ ಇದೆ. ಸರ್ವೆ ನಂ. 43/2 ರಲ್ಲಿ ಒಟ್ಟು 0.37 ವರೆ ಗುಂಟೆ ಇದೆ. ಗೋಪಾಲಸ್ವಾಮಿರವರಿಗ ಸರ್ವೆ ನಂ. 43/2 ರಲ್ಲಿ 0.14 ವರೆ ಗುಂಟೆ ಜಮೀನು ಇರುವ ಬಗ್ಗೆ ಆರ್ ಟಿ ಸಿ ನೋಡಿದ್ದೇನೆ. ಆ ಜಮೀನನ್ನು ಸಹ ನೋಡಿದ್ದೇನೆ.

ದಿನಾಂಕ 29.01.2018 ರಂದು ಗೋಪಾಲಸ್ವಾಮಿ, ನನ್ನ ತಂಗಿ, ನಾನು, ಸತ್ಯನಾರಾಯಣ ಹಾಗೂ ನಾರಾಯಣಗೌಡರು ಮಾತುಕತೆಗೆ ಸೇರಿದ್ದೆವು ಎಂಬುದು ಮತ್ತು ಕ್ರಯದ ಬಗ್ಗೆ ಮಾತುಕತೆ ನಡೆಯಿತು ಎಂಬುದು ಸುಳ್ಳು ಮತ್ತು ಕಟ್ಟುಕತೆ ಎಂದರೆ ಸರಿಯಲ್ಲ. ಅಂತಹ ಮಾತುಕತೆ ಸಮಯದಲ್ಲಿ ಗೋಪಾಲಸ್ವಾಮಿರವರ ಹೆಸರಿನಲ್ಲಿ ಸರ್ವೆ ನಂ. 43/2 ರಲ್ಲಿ 0.14 ವರೆ ಗುಂಟೆ ವಿಸ್ತೀರ್ಣದ ಜಮೀನಿನ

ಆರ್ ಟಿ ಸಿ ಇರಲಿಲ್ಲ ಎಂದರೆ ಸರಿಯಲ್ಲ.

ಆರ್ ಟಿ ಜಿ ಎಸ್ ಮೂಲಕ ಗೋಪಾಲಸ್ವಾಮಿರವರಿಗೆ ವಾದಿಯಿಂದ ವರ್ಗಾವಣೆಯಾಗಿರುವ ಹಣವು ಗೋಪಾಲಸ್ವಾಮಿರವರು ನನ್ನ ಸ್ನೇಹಿತರಾಗಿರುವ ಕಾರಣ ಗೋಪಾಲಸ್ವಾಮಿರವರಿಗೆ ವಾದಿಯು ಸಾಲ ನೀಡಿದ ಹಣವಾಗಿದೆ ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ ನನ್ನ ತಂಗಿಯು ಕೆಲವು ದಾಖಲೆಗಳನ್ನು ಪಡೆದಕೊಂಡಿದ್ದರು ಎಂದರೆ ಸರಿಯಲ್ಲ. ದಿನಾಂಕ 29.01.2018ರ ಮಾತುಕತೆಯಾದ ನಂತರ ಪುನಃ ಮಾತುಕತೆಗೆ ಸೇರಿಲ್ಲ, ಆದರೆ ಕ್ರಯಪತ್ರವನ್ನು ಬರೆದುಕೊಡುವಂತೆ ಕೇಳುತ್ತಿದ್ದೆವು. ಗೋಪಾಲಸ್ವಾಮಿರವರು ವಾದಿಯಿಂದ ಸಾಲವಾಗಿ ಪಡೆದುಕೊಂಡಿದ್ದ ಹಣವನ್ನು ಅವರು ಬದುಕಿದ್ದಾಗಲೇ ವಾದಿಗೆ ಮರು ಪಾವತಿ ಮಾಡಿದ್ದಾರೆ ಎಂದರೆ ವಾದಿಯು ಗೋಪಾಲಸ್ವಾಮಿರವರಿಗೆ ಯಾವುದೇ ಸಾಲ ನೀಡಿಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಹೇಳಿರುವ ರೀತಿಯಲ್ಲಿ ವಾದಿಯು ಆರ್ ಟಿ ಜಿ ಎಸ್ ಮೂಲಕ ಗೋಪಾಲಸ್ವಾಮಿರವರಿಗೆ ಮಾಡಿರುವ ಹಣದ ವರ್ಗಾವಣೆಯನ್ನು ಹೊರತುಪಡಿಸಿ ಬೇರೆ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ವಾದಿಯು ಗೋಪಾಲಸ್ವಾಮಿರವರಿಗೆ ಆರ್ ಟಿ ಜಿ ಎಸ್ ಮೂಲಕ ವರ್ಗಾವಣೆ ಮಾಡಿದ ಹಣವು ಸಾಲಕ್ಕಾಗಿ ನೀಡಿದ ಹಣವೇ ಹೊರತು ಕ್ರಯಕ್ಕಾಗಿ ನೀಡಿದ ಹಣ ಅಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಗೋಪಾಲಸ್ವಾಮಿಯ ನಡುವೆ ಕ್ರಯಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ನಡೆಯದೆ ಇದ್ದರೂ ಸಹ ಅವರು ಮೃತಪಟ್ಟ ನಂತರ ವಾದಿ, ನಾನು, ಹಾಗೂ ಇತರೆ ಸಾಕ್ಷಿಗಳು ನಿಶಾನೆ ಪಿ 1 ಮತ್ತು 2 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಮತ್ತು 2 ರ ರೀತಿಯ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

ಗೋಪಾಲಸ್ವಾಮಿ ಮತ್ತು ವಾದಿಯ ನಡುವೆ ಕ್ರಯಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ನಡೆಯದೆ ಇರುವ ಕಾರಣ ಗೋಪಾಲಸ್ವಾಮಿರವರ

ವಾರಸುದಾರರು ವಾದಿಗೆ ಯಾವುದೇ ಕ್ರಯಪತ್ರ ಬರೆದುಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

ಕ್ರಯಕ್ಕೆ ಸಂಬಂಧಿಸಿದ ಯಾವುದೇ ವ್ಯವಹಾರ ನಡೆಯದೆ ಇದ್ದರೂ ಸಹ ವಾದಿ, ನಾನು ಮತ್ತು 3 ಮತ್ತು 4 ನೇ ಪ್ರತಿವಾದಿಗಳು ಸೇರಿಕೊಂಡು ದಾಖಲೆಗಳನ್ನು ಸೃಷ್ಟಿ ಮಾಡಿ 2 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ನನ್ನ ತಂಗಿಗೆ ಅನುಕೂಲ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**